# ಸಿಕ್ಸರುಗಳ ಚಕ್ರವರ್ತಿ

ಕ್ರಿಕೆಟ್ ಸ್ಟೇಡಿಯಂ ಎನ್ನುವುದೇ ಬೇರೆ. ಮೈದಾನದ ತುದಿಗೆ ಸುತ್ತಲೂ ಬೌಂಡರಿ ಗೆರೆ ಹಾಕಿ ಇಷ್ಟರೊಳಗೇ ಕ್ರಿಕೆಟ್ ಆಡಿ ಎಂದು ನಿಯಮ ಮಾಡಿರುತ್ತಾರೆ. ಆದರೆ ಈ ಕ್ರಿಸ್ ಗೇಲ್ ಎಂಬ 'ಸಿಕ್ಸರ್‌ಗಳ ಚಕ್ರವರ್ತಿ'ಗೆ ಬೌಂಡರಿ ಗೆರೆ ಮಾತ್ರವಲ್ಲ, ಸ್ಟೇಡಿಯಂ ಕೂಡಾ ಸಾಲುವುದಿಲ್ಲ. ಅವನ ಬಹುತೇಕ ಹೊಡೆತಗಳು ಪ್ರೇಕ್ಷಕರ ಗ್ಯಾಲರಿಗೆ. ಸಾಕಷ್ಟು ಹೊಡೆತಗಳು ಸ್ಟೇಡಿಯಂನಿಂದ ಹೊರಗೆ. ಮೂರು ವಾರಗಳ ಹಿಂದೆ ಆತ ಇಂಗ್ಲೆಂಡ್ ವಿರುದ್ಧ ಆಡಿದ ಏಕದಿನ ಪಂದ್ಯದಲ್ಲಿ 97 ಎಸೆತಗಳನ್ನು ಎದುರಿಸಿ 162 ರನ್‌ಗಳನ್ನು ಬಾರಿಸಿದ. ಅದರಲ್ಲಿ ಬೌಂಡರಿಗಳಿದ್ದುದು ಕಡಿಮೆ. ಸಿಕ್ಸರ್‌ಗಳು ಹದಿನಾಲ್ಕು! ಒಂದಂತೂ ಸ್ಟೇಡಿಯಂ ಹೊರಗೆ ಹೋಗಿ ಬಿತ್ತು. ಹೀಗೆ ಚೆಂಡನ್ನು ಸ್ಟೇಡಿಯಂ ಹೊರಕ್ಕೆ ಹೊಡೆದಟ್ಟುವುದು ಈತನಿಗೆ ಹೊಸತೇನಲ್ಲ. ಸ್ಟೇಡಿಯಂನಿಂದ ಹೊರಕ್ಕೆ ಹೊಡೆದು ಚೆಂಡು ಕಳೆದುಹೋಗುವುದನ್ನು ದಾಖಲೆ ಎಂದು ಐಸಿಸಿ ಏನಾದರೂ ಪರಿಗಣಿಸಿದರೆ, ಆ ವಿಶ್ವದಾಖಲೆ ಖಂಡಿತ ಕ್ರಿಸ್ ಗೇಲ್ ಹೆಸರಲ್ಲೇ ಇರುತ್ತದೆ! ಇಂಗ್ಲೆಂಡ್ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ ಹೊಡೆದ ಒಂದು ಚೆಂಡು ಎಲ್ಲಿ ಹೋಗಿ ಬಿತ್ತೋ ಗೊತ್ತಿಲ್ಲ, ಹುಡುಕಿದರೂ ಸಿಗಲಿಲ್ಲ! 120 ಮೀಟರ್‌ಗೂ ದೂರ ಚಿಮ್ಮಿದ ಈ ಚೆಂಡು ಸ್ಟೇಡಿಯಂ ಹೊರಗೆ ಬಂದರ ಧಕ್ಕೆಯಲ್ಲಿ ನಿಂತಿದ್ದ ಹಡಗಿನೊಳಕ್ಕೆ ಬಿದ್ದಿರಬೇಕೆಂದು ಕೊನೆಗೆ ಸಂಘಟಕರು ಊಹಿಸಿದರಂತೆ! ಹೀಗೆ ಗೇಲ್ ಆಡುವ ಪಂದ್ಯದಲ್ಲಿ ಚೆಂಡು ಕಳೆದುಹೋಗುವುದು ಇದು ಎಂಟನೇ ಸಲ! ಎಂಟೂ ಸಲ ಅಂಪೈರ್‌ಗಳು ಚೆಂಡನ್ನು ಹುಡುಕಿಸಲಾಗದೆ ಹೊಸ ಚೆಂಡನ್ನು ಆಟವಾಡಲು ಕೊಟ್ಟಿದ್ದಾರೆ.





ಸದ್ಯಕ್ಕೆ ಈತನೇ ಜಾಗತಿಕ ಕ್ರಿಕೆಟ್‌ನ ಸಿಕ್ಸರ್‌ಗಳ ಚಕ್ರವರ್ತಿ. ಟೆಸ್ಟ್, ಏಕದಿನ ಪಂದ್ಯ, ಟಿ20 ಪಂದ್ಯಗಳಲ್ಲಿ ಈತ ಈವರೆಗೆ ಗಳಿಸಿರುವ ಒಟ್ಟು ಸಿಕ್ಸರ್‌ಗಳ ಸಂಖ್ಯೆ 506. ಈವರೆಗೆ ಪಾಕಿಸ್ತಾನದ ಶಾಹಿದ್ ಅಫ್ರಿದಿ ಹೆಸರಿನಲ್ಲಿದ್ದ ಅತ್ಯಧಿಕ ಒಟ್ಟು ಸಿಕ್ಸರ್‌ಗಳ ದಾಖಲೆಯನ್ನು ಗೇಲ್ ಹಿಂದಿಕ್ಕಿದ್ದಾನೆ. ಶಾಹಿದ್ ಅಫ್ರಿದಿ (476 ಸಿಕ್ಸರ್), ಬ್ರೆಂಡನ್ ಮೆಕ್ಲಮ್ (398), ಮಹೇಂದ್ರಸಿಂಗ್ ದೋನಿ (352) ಮತ್ತು ಸನತ್ ಜಯಸೂರ್ಯ (352)– ಎಲ್ಲರೂ ಈಗ ಕ್ರಿಸ್ ಗೇಲ್‌ನ ಹಿಂದಿದ್ದಾರೆ. ಅದರಲ್ಲೂ ಅಫ್ರಿದಿ, ಜಯಸೂರ್ಯ, ಬ್ರೆಂಡನ್ ಮೆಕ್ಲಂ ಸದ್ಯಕ್ಕೆ ಏಕದಿನ ಕ್ರಿಕೆಟ್‌ನಲ್ಲಿ ಆಡುತ್ತಿಲ್ಲವಾದ್ದರಿಂದ ಗೇಲ್ ದಾಖಲೆಯನ್ನು ಇವರು ಮುರಿಯುವುದು ಕಷ್ಟವೇ. ಆದರೆ ಏಕದಿನ ಪಂದ್ಯಗಳಲ್ಲಿ ಅತ್ಯಧಿಕ ಸಿಕ್ಸರ್‌ಗಳ ದಾಖಲೆ ಈಗಲೂ ಶಾಹಿದ್ ಅಫ್ರಿದಿ (351) ಹೆಸರಲ್ಲಿದೆ. ಏಕದಿನ ಪಂದ್ಯಗಳಲ್ಲಿ 300 ಸಿಕ್ಸರ್‌ಗಳನ್ನು ದಾಟಿ ಮುನ್ನುಗ್ಗುತ್ತಿರುವ ಗೇಲ್ ಆ ದಾಖಲೆಯನ್ನೂ ಶೀಘ್ರ ಅಳಿಸಬಹುದು.

50 ಓವರ್‌ಗಳ ಪಂದ್ಯದಿಂದ ಕೆಲಕಾಲ ಹೊರಗಿದ್ದ ಕ್ರಿಸ್ ಗೇಲ್, ಮತ್ತೆ ಆಡಲು ಬಂದದ್ದೇ ಸಿಕ್ಸರ್‌ಗಳ ಸುರಿಮಳೆಗೈದಿದ್ದಾನೆ. ಇದರೊಂದಿಗೆ ಈತ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಂದ ನಿವೃತ್ತನಾಗುತ್ತಾನೆ ಎಂಬ ಸುದ್ದಿಗೂ ತೆರೆ ಬಿದ್ದಂತಾಗಿದೆ. 'ಈ ವರ್ಷ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಬಳಿಕ ನಿವೃತ್ತನಾಗಬೇಕು' ಎಂದು ಹಿಂದೆ ಪ್ರಕಟಿಸಿದ್ದ ಗೇಲ್, 'ಈಗ ಫಾರ್ಮ್ ಚೆನ್ನಾಗಿದೆ. ಇನ್ನೂ ಎಷ್ಟು ವರ್ಷ ಆಡುತ್ತೇನೋ ಗೊತ್ತಿಲ್ಲ' ಎಂದು ಹೇಳಿರುವುದು ಸುದ್ದಿಯಾಗಿದೆ. 'ನಾನು ಹಲವು ದೇಶಗಳಲ್ಲಿ ಟಿ20 ಪಂದ್ಯಗಳಲ್ಲಿ ಆಡುತ್ತಿದ್ದೇನೆ. 50 ಓವರ್‌ಗಳ ಪಂದ್ಯಗಳಲ್ಲಿ ಆಡುವುದು ಇನ್ನು ಮುಂದೆ ಕಷ್ಟ ಅಂದುಕೊಂಡಿದ್ದೆ. ಆದರೆ ನನ್ನ ದೇಹ ಏಕದಿನ ಪಂದ್ಯಕ್ಕೂ ಹೊಂದಿಕೊಂಡಿದೆ ಎನ್ನುವುದು ಖಚಿತವಾಯಿತು' ಎಂದಿದ್ದಾನೆ ಈತ. ವೆಸ್ಟಿಂಡೀಸ್ ಪರ ಏಕದಿನ ತಂಡದಿಂದ ಕೆಲಕಾಲ ಹೊರಗಿದ್ದರೂ, ಇದೀಗ ಮತ್ತೆ ತಂಡಕ್ಕೆ ಸೇರಿದ ಬಳಿಕ, ಕೇವಲ ನಾಲ್ಕು ಪಂದ್ಯಗಳಲ್ಲಿ ಒಟ್ಟು 347 ರನ್‌ಗಳನ್ನು ಹೊಡೆದಿರುವುದು ಈತನ ಫಾರ್ಮ್ ಇನ್ನೂ ಅತ್ಯುತ್ತಮವಾಗಿದೆ ಎನ್ನುವುದನ್ನು ಖಚಿತಪಡಿಸಿದೆ.

ಸೆಪ್ಟೆಂಬರ್ 21ಕ್ಕೆ 40ನೇ ವರ್ಷಕ್ಕೆ ಕಾಲಿಡಲಿರುವ ಗೇಲ್, ಟೆಸ್ಟ್ ಪಂದ್ಯಗಳನ್ನು ಆಡಿರುವುದು ಕಡಿಮೆಯೇ. ಈತ ಗಳಿಸಿರುವ ಸಿಕ್ಸರ್‌ಗಳ ಸಂಖ್ಯೆಯೂ ಹಾಗೆಯೇ. ಟೆಸ್ಟ್ ಪಂದ್ಯದಲ್ಲಿ 98, ಏಕದಿನ ಪಂದ್ಯಗಳಲ್ಲಿ 305 ಮತ್ತು ಟಿ20 ಪಂದ್ಯಗಳಲ್ಲಿ 103 ಸಿಕ್ಸರ್‌ಗಳನ್ನು ಈತ ಸಿಡಿಸಿದ್ದಾನೆ. 'ಸ್ವಲ್ಪ ವರ್ಕೌಟ್ ಮಾಡಿದರೆ ದೇಹತೂಕ ಇನ್ನಷ್ಟು ಕಡಿಮೆಯಾಗಲಿದೆ. ಆಗ ವಿಕೆಟ್ ನಡುವಣ ಓಟ ಸುಲಭವಾಗಲಿದೆ. ಅದು ಈಗಿನ ಅಗತ್ಯ' ಎಂದು ಗೇಲ್ ಒಪ್ಪಿಕೊಂಡಿದ್ದಾನೆ. ಆದರೆ ಈತನ ಆಟವನ್ನು ನೋಡಿದಾಗೆಲ್ಲ ಗಮನಕ್ಕೆ ಬರುವ ಅಂಶವೆಂದರೆ ವಿಕೆಟ್ ನಡುವೆ ಓಡಿ ಒಂದು ರನ್ ತೆಗೆಯುವುದರಲ್ಲಿ ಈತ ಸೋಮಾರಿಯೇ. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಈತ ಈವರೆಗೆ ಗಳಿಸಿದ ಬೌಂಡರಿಗಳ ಸಂಖ್ಯೆಯೂ 516 ತಲುಪಿದೆ.

ಏಕದಿನ ಮತ್ತು ಟಿ20 ಎರಡೂ ವಿಧದ ಕ್ರಿಕೆಟ್‌ನಲ್ಲಿ ಈತ ತಲಾ 10ಸಾವಿರ ರನ್‌ಗಳನ್ನು ದಾಟಿದ್ದಾನೆ. ಏಕದಿನ ಪಂದ್ಯಗಳಲ್ಲಿ 10 ಸಾವಿರ ರನ್ ದಾಟಿದವರ ಪೈಕಿ ಈತ ವಿಶ್ವದಲ್ಲಿ 14ನೆಯವನು. ಆದರೆ ವೆಸ್ಟಿಂಡೀಸ್‌ನಲ್ಲಿ ಬ್ರಿಯಾನ್ ಲಾರಾ ಬಿಟ್ಟರೆ ಈತನೊಬ್ಬನೇ. ಲಾರಾ ಏಕದಿನ ಪಂದ್ಯಗಳಲ್ಲಿ ಒಟ್ಟು 10,405 ರನ್ ಗಳಿಸಿದ್ದು, ಗೇಲ್ ಶೀಘ್ರದಲ್ಲೇ ಈ ದಾಖಲೆಯನ್ನೂ ತನ್ನದಾಗಿಸಿಕೊಳ್ಳುವುದು ಖಚಿತ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65